**SC No. 245/2023**
**PW-15**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 245/2023**

| | | |
|---|---|---|
| ಸಾಕ್ಷಿದಾರರ ಹೆಸರು | ಮದನ್ ಕುಮಾರ್ ಎಸ್.ಎಂ. | ಪ್ರಮಾಣ ವಚನ ಮಾಡಿದ ದಿನಾಂಕ: 08.04.2026 |
| ತಂದೆಯ/ಗಂಡನ ಹೆಸರು | ಶೇಖರ್ | |
| ವಯಸ್ಸು | 27 ವರ್ಷ | |
| ವೃತ್ತಿ | ವಿದ್ಯಾರ್ಥಿ | ಫ್ರಾ.ಸಾಃ 15 |
| ವಾಸ ಸ್ಥಳ | ಕುಂಬಾರಕೊಪ್ಪಲು, ಮೈಸೂರು | ಚಾ.ಸಾಃ 11 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿಯ ಮುಖ ಪರಿಚಯ ಇರುತ್ತದೆ. ಫ್ರಾಸಾ-2 ನನಗೆ ಗೊತ್ತು. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ನನಗೆ ಸಹಿ ಮಾಡು ಎಂದು ಹೇಳಿದ್ದರು ನಾನು ಸಹಿ ಮಾಡಿದ್ದೆ. ಯಾವ ಕಾರಣಕ್ಕಾಗಿ ನನ್ನ ಸಹಿ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು**

**ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 14.03.2023 ರಂದು ರಾತ್ರಿ ಸುಮಾರು 9.00 ಗಂಟೆಗೆ ನಾನು ಆಟೋ ಬಾಡಿಗೆ ಮುಗಿಸಿಕೊಂಡು ಮನೆಗೆ ಬಂದಾಗ ಚಿಕ್ಕಪ್ಪ ಮಹೇಶ @ ಪಾಂಡು ರವರ ಮಗ ಆದಿತ್ಯ ನಮ್ಮ ಮನೆಯಲ್ಲಿ ಇದ್ದ ಎಂದರೆ ಸರಿಯಲ್ಲ. ನನ್ನನ್ನು ಕಂಡ ತಕ್ಷಣ ಹೂಟಗಳ್ಳಿಯ ಅಪ್ಪನ ಕ್ಲಬ್ ಹತ್ತಿರ ಆಟೋದಲ್ಲಿ ಡ್ರಾಪ್ ಮಾಡು ಎಂದು ಕೇಳಿದ್ದ ನಾನು ಅವನು ಹೇಳಿದ ದಾರಿಯಲ್ಲಿಯೇ ಕರೆದುಕೊಂಡು ಹೂಟಗಳ್ಳಿ ಸಂತೆಮಾಳದ ಬಳಿ ಹೋಗುತ್ತಿದ್ದಂತೆಯೇ ಆದಿತ್ಯನು ಹೇಳದೇ ಕೇಳದೇ ಆಟೋದಿಂದ ಇಳಿದು ಓಡಿ ಹೋಗಿದ್ದ ಎಂದರೆ ಸರಿಯಲ್ಲ. ನಾನು ಗಾಬರಿಗೊಂಡು ಚಿಕ್ಕಪ್ಪನಿಗೆ ವಿಚಾರವನ್ನು ತಿಳಿಸಿದಾಗ ಚಿಕ್ಕಪ್ಪ ಯಾರಿಗೋ ಫೋನ್ ಕಾಲ್ ಮಾಡಿ ಕೇಳಿದಾಗ ಆದಿತ್ಯನು ಗುಡ್ಡಪ್ಪ ನಾಗೇಶ್ ರವರ ಮಗ ಚಂದನ್ ಎಂಬುವರ ಮನೆ ಬಳಿ ಹೋಗಿ ಡ್ರಾಗರ್ ನಿಂದ ಚುಚ್ಚಿದ್ದಾನೆ ಎಂದು ಹೇಳಿದ ವಿಚಾರ ತಿಳಿದುಕೊಂಡು ನನಗೂ ಸಹ ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ವಾಪಸ್ಸು ಆಟೋದಲ್ಲಿ ಏರಿಯಾಗೆ ಬಂದಾಗ 2 ವರ್ಷದ ಹಿಂದೆ ಆದಿತ್ಯ ಮತ್ತು ತೇಜು ವಾಟರ್ ಮೆನ್ ವಿನಯ್ ಎಂಬುವನಿಗೆ ಚಾಕುವಿನಿಂದ ಚುಚ್ಚಿದ್ದರಿಂದ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಕೇಸು ಆಗಿದ್ದು ಚಂದನ್ ಸಾಕ್ಷಿಯಾಗಿದ್ದರಿಂದ ಆದಿತ್ಯನು ಚಂದನ್ ಗೆ

ಕೋರ್ಟ್ ನಲ್ಲಿ ಆದಿತ್ಯನ ವಿರುದ್ಧ ಸಾಕ್ಷಿ ಹೇಳಕೂಡದು ಹೇಳಿದರೆ ಸುಮ್ಮನೆ ಬಿಡುವುದಿಲ್ಲ ಮುಗಿಸಿಬಿಡುತ್ತೇನೆ ಎಂದು ಡ್ರಾಗರ್ ನಿಂದ ಮಾರಣಾಂತಿಕ ಹಲ್ಲೆ ಮಾಡಿ ಓಡಿ ಹೋಗಿರುತ್ತಾನೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ ನಿಪಿ–30 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**